# ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ

(ಭಾರತ ಮತ್ತು ಕರ್ನಾಟಕ ಸರ್ಕಾರಗಳಿಂದ ಶಾಶ್ವತ ಮಾನ್ಯತೆ ಪಡೆದ, ಜೆಎಸ್‌ಎಸ್ ಮಹಾವಿದ್ಯಾಪೀಠ-ಮೈಸೂರು, ಅಂಗಸಂಸ್ಥೆ)

ಸಿಎ ನಂ. 5, 5ನೇ ಮುಖ್ಯ ರಸ್ತೆ, ಬಸವೇಶ್ವರ ಬ್ಲಾಕ್
ಡಾ. ರಾಧಾಕೃಷ್ಣನ್ ನಗರ, (ಟೀಚರ್ಸ್ ಲೇಔಟ್),
ಮೈಸೂರು - 570 029
ದೂರವಾಣಿ : 0821-2548269
ಈ-ಮೇಲ್ : jsskar.openschool_mysore@yahoo.com
jsskos99@gmail.com
Website : www.jsskos.com


ನಂ.ಜೆಎಸ್‌ಎಸ್‌ಕೆಓಎಸ್/ಕ.ಕೇ-7/ಅಧಿಸೂಚನೆ-01/49/2026-27 ದಿನಾಂಕ : 10.06.2026

## ಅಧಿಸೂಚನೆ

ವಿಷಯ : ಕರ್ನಾಟಕ ಮುಕ್ತ ವಿದ್ಯಾಲಯ (ಕೆಓಎಸ್) 2026-27ನೇ ಸಾಲಿನ ದಾಖಲಾತಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಮುಕ್ತ ವಿದ್ಯಾಲಯ ಕಲಿಕಾ ಕೇಂದ್ರಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ : ಇಡಿ 52, ಎಸ್‌ಇಎಸ್ 98, ಬೆಂಗಳೂರು ದಿನಾಂಕ 15.05.1999

2) ಸರ್ಕಾರದ ಆದೇಶ ಸಂಖ್ಯೆ : ಇಡಿ 52 ಎಸ್‌ಇಎಸ್ 98, ಬೆಂಗಳೂರು, ದಿನಾಂಕ 22.12.2001

3) ಸರ್ಕಾರದ ಆದೇಶ ಸಂಖ್ಯೆ : ಇಡಿ 73 ಎಸ್‌ಎಲ್‌ಬಿ 2006, ಬೆಂಗಳೂರು, ದಿನಾಂಕ 06.09.2006.

ರಾಷ್ಟ್ರೀಯ ಮುಕ್ತ ವಿದ್ಯಾಲಯದ ನಿಯಮದಂತೆ ಕರ್ನಾಟಕದಲ್ಲಿ ಮಧ್ಯಂತರ ಶಾಲೆ ಬಿಟ್ಟ ಮಕ್ಕಳನ್ನು ಶಿಕ್ಷಣದ ಪ್ರಮುಖವಾಹಿನಿಗೆ ತರಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುಮತಿ ಪಡೆದ ಏಕೈಕ ಸಂಸ್ಥೆಯಾದ ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯವು (Karnataka Open School) ರಾಜ್ಯಾದ್ಯಂತ ಇರುವ ಎಲ್ಲಾ ಕಲಿಕಾ ಕೇಂದ್ರಗಳಲ್ಲಿ 2026-27ನೇ ಸಾಲಿನ ದಾಖಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಇದರೊಂದಿಗೆ ಲಗತ್ತಿಸಿದೆ. ದಾಖಲಾತಿ ಪ್ರಕ್ರಿಯೆ ಪ್ರಾರಂಭಿಸಲು ದಿನಾಂಕ 10.06.2026 ರಂದು ಅಧಿಸೂಚನೆ ಹೊರಡಿಸಲಾಗಿದೆ.

### 1. ದಾಖಲಾತಿಗೆ ಅರ್ಹತೆಗಳು :

- ದಾಖಲಾತಿ ಮಾಡಿಕೊಳ್ಳುವ ಕಲಿಕಾರ್ಥಿಗೆ ಶೈಕ್ಷಣಿಕ ವರ್ಷದ 2027ನೇ ಮಾರ್ಚ್ 1ನೇ ದಿನಾಂಕಕ್ಕೆ 15 ವರ್ಷ ವಯೋಮಿತಿ ತುಂಬಿದವರು ಮಾತ್ರ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ, ಅಂದರೆ ಕರ್ನಾಟಕ ಮುಕ್ತ ಶಾಲೆಗೆ ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ದಿನಾಂಕ 01.03.2027ಕ್ಕೆ 15 ವರ್ಷಗಳ ವಯೋಮಿತಿ ಪೂರ್ಣಗೊಂಡಿರಬೇಕು
- ಕಲಿಕಾರ್ಥಿ ಸಾಂಪ್ರದಾಯಿಕ ಶಾಲೆಯಲ್ಲಿ ಕನಿಷ್ಠ 7ನೇ ತರಗತಿವರೆಗೆ ಓದಿರಬೇಕು, 7, 8, 9ನೇ ತರಗತಿಯಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣ ಅಥವಾ ಅನುತ್ತೀರ್ಣರಾಗಿರುವವರು ಹಾಗೂ 10ನೇ ತರಗತಿಯಲ್ಲಿ ಅನುತ್ತೀರ್ಣರಾಗಿರುವವರು ಪ್ರವೇಶಕ್ಕೆ ಅರ್ಹರು
- ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು
- ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು ಡಿಬಾರ್ ಆಗಿರುವ ಅಭ್ಯರ್ಥಿಗಳ ಪ್ರವೇಶಕ್ಕೆ ಅವಕಾಶವಿಲ್ಲ. ಅಂತಹ ಅಭ್ಯರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದು ಕಂಡುಬಂದಲ್ಲಿ ಅಂತಹ ಕಲಿಕಾ ಕೇಂದ್ರಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು
- ವಿದ್ಯಾರ್ಥಿ ಜನ್ಮ ದಿನಾಂಕ ದೃಢೀಕರಣಕ್ಕಾಗಿ ಪ್ರವೇಶಾರ್ಥಿಯ ಮೂಲ ವರ್ಗಾವಣೆ ಪ್ರತಿ (TC) ಪಡೆದು ಪರೀಕ್ಷಿಸಿ ಖಚಿತ ಪಡಿಸಿಕೊಳ್ಳುವುದು
- ದಾಖಲಾದ ವಿದ್ಯಾರ್ಥಿಗಳು ಮೂರು ವರ್ಷದ ಅವಧಿಯಲ್ಲಿ ಒಟ್ಟು ಆರು ಸತತ ಪ್ರಯತ್ನಗಳೊಡನೆ ತೇರ್ಗಡೆ ಹೊಂದಲು ಮಾತ್ರ ಅವಕಾಶವಿರುತ್ತದೆ

- ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ವಿಳಾಸ ಪಡೆದು ದಾಖಲಿಸಬೇಕು

**"ಕರ್ನಾಟಕ ಮುಕ್ತ ವಿದ್ಯಾಲಯ 10ನೇ ತರಗತಿ ಅಂಕಪಟ್ಟಿ ಸಾಂಪ್ರದಾಯಿಕ ಶಿಕ್ಷಣ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಗೆ ಸಮಾನ / ತತ್ಸಮಾನ"ವೆಂದು ಕರ್ನಾಟಕ ಸರ್ಕಾರದಿಂದ ಆದೇಶವಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಎಸ್‌ಎಲ್‌ಬಿ 2006, ಬೆಂಗಳೂರು, ದಿನಾಂಕ 06.09.2006.**

## 2. ವಿಷಯಗಳ ಆಯ್ಕೆ

**ಭಾಗ-1 ಭಾಷಾ ವಿಷಯಗಳು (ಮೂರು ಭಾಷಾ ವಿಷಯಗಳು ಕಡ್ಡಾಯ)**

| ಕ್ರ.ಸಂ. | ವಿಷಯ | ವಿಷಯ ಸಂಕೇತ | ಗರಿಷ್ಠ ಅಂಕಗಳು |
|---|---|---|---|
| 1 | ಪ್ರಥಮ ಭಾಷೆ ಕನ್ನಡ | 208 | 125 |
| 2 | ದ್ವಿತೀಯ ಭಾಷೆ ಇಂಗ್ಲೀಷ್ | 202 | 100 |
| 3 | ತೃತೀಯ ಭಾಷೆ ಹಿಂದಿ | 201 | 100 |

**ಭಾಗ-2 ಐಚ್ಛಿಕ ವಿಷಯಗಳು (ಯಾವುದಾದರೂ ಮೂರು ವಿಷಯಗಳು)**

| ಕ್ರ.ಸಂ. | ವಿಷಯ | ವಿಷಯ ಸಂಕೇತ | ಗರಿಷ್ಠ ಅಂಕಗಳು |
|---|---|---|---|
| 1 | ಗಣಿತ | 211 | 100 |
| 2 | ವಿಜ್ಞಾನ ಮತ್ತು ತಂತ್ರಜ್ಞಾನ | 212 | 100 |
| 3 | ಸಮಾಜ ವಿಜ್ಞಾನ | 213 | 100 |
| 4 | ಅರ್ಥಶಾಸ್ತ್ರ | 214 | 100 |
| 5 | ವಾಣಿಜ್ಯ ಅಧ್ಯಯನ | 215 | 100 |
| 6 | ಗೃಹ ವಿಜ್ಞಾನ | 216 | 100 |

ದಾಖಲಾತಿ ಪಡೆಯುವ ಸಮಯದಲ್ಲಿ ಅಭ್ಯರ್ಥಿಯು ಒಮ್ಮೆ ಆಯ್ಕೆ ಮಾಡಿಕೊಂಡ ವಿಷಯಗಳೇ ಅಂತಿಮವಾಗಿದ್ದು, ಯಾವುದೇ ಕಾರಣಕ್ಕೂ ವಿಷಯ ಬದಲಾವಣೆಗೆ ಅವಕಾಶವಿರುವುದಿಲ್ಲ. ಸದರಿ ವಿಷಯವನ್ನು ಸಂಬಂಧಿಸಿದ ಕರ್ನಾಟಕ ಮುಕ್ತ ವಿದ್ಯಾಲಯ ಕಲಿಕಾ ಕೇಂದ್ರಗಳಲ್ಲಿನ ಸಮನ್ವಯಾಧಿಕಾರಿಗಳು ಅಭ್ಯರ್ಥಿಗಳ ಗಮನಕ್ಕೆ ಪ್ರವೇಶ ಸಂದರ್ಭದಲ್ಲಿ ತರುವುದು

## 3. ದಾಖಲಾತಿ ಮಾಡಿಕೊಳ್ಳಲು ಪಾಲಿಸಬೇಕಾದ ಸೂಚನೆಗಳು ಮತ್ತು ಅನುಸರಿಸಬೇಕಾದ ಕ್ರಮಗಳು

- ದಾಖಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರಕಾರ್ಯ ಕೈಗೊಳ್ಳುವುದು. (ಉದಾಹರಣೆಗೆ: ಪತ್ರಿಕಾ ಪ್ರಕಟಣೆ ನೀಡಿಕೆ, ಬ್ಯಾನರ್, ವಾಲ್‌ಪೋಸ್ಟ್ (ಭಿತ್ತಿಪತ್ರ) ಮತ್ತು ಫ್ಲೆಕ್ಸ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸುವುದು, ಪರಿಚಯ ಪತ್ರಿಕೆ ವಿತರಣೆ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪತ್ರಿಕಾಗೋಷ್ಠಿ ಏರ್ಪಡಿಸುವಿಕೆ, ಸಾಮಾಜಿಕ ಜಾಲತಾಣಗಳ ಬಳಕೆ ಇತ್ಯಾದಿ...)

- ಮುಕ್ತ ವಿದ್ಯಾಲಯದ ಅರ್ಜಿ ಮತ್ತು ಪರಿಚಯ ಪತ್ರಿಕೆಯನ್ನು ನಿಗಧಿತ ದಿನಾಂಕ ಮತ್ತು ವೇಳೆಯಲ್ಲಿ ಪ್ರವೇಶಾರ್ಥಿಗಳಿಗೆ ವಿತರಿಸುವುದು

- ದಾಖಲಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ವಿದ್ಯಾರ್ಥಿಗೆ ಸಂಬಂಧಿಸಿದ ವರ್ಗಾವಣೆ ಮೂಲಪ್ರತಿ (TC), ವಾಸಸ್ಥಳ ದೃಢೀಕರಣ ಪ್ರತಿ, ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ವಿದ್ಯಾರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ಮೂರು ಭಾವಚಿತ್ರಗಳನ್ನು ಪಡೆದು ಪ್ರವೇಶ ಅರ್ಜಿಗಳ ಜೊತೆ ಲಗತ್ತಿಸಬೇಕು, ವಿದ್ಯಾರ್ಥಿಯ ಮೊಬೈಲ್ ಸಂಖ್ಯೆಯನ್ನು ಅರ್ಜಿಯಲ್ಲಿ ದಾಖಲಿಸುವುದು ಕಡ್ಡಾಯ. ಮೇಲ್ಕಂಡ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ದೃಢೀಕರಿಸುವುದು

## 4. ಶುಲ್ಕ ವಿವರ

| ಕ್ರ. ಸಂ. | ವಿವರ | ಮೊಬಲಗು (ರೂ.ಗಳಲ್ಲಿ) |
|---|---|---|
| 1. | ದಾಖಲಾತಿ ಅರ್ಜಿ ಮತ್ತು ಪರಿಚಯ ಪತ್ರಿಕೆ ಫೀ | 100/– |
| 2. | ನೊಂದಣಿ ಫೀ | 100/– |
| 3. | ದಾಖಲಾತಿ ಫೀ | 100/– |
| 4. | ಕಲಿಕಾ ಸಾಮಾಗ್ರಿ / ಪಠ್ಯ ಪುಸ್ತಕ ಫೀ | 2,250/– |
| 5. | ವೈಯಕ್ತಿಕ ಸಂಪರ್ಕ ತರಗತಿ ಫೀ | 600/– |
| 6. | ಸಾದಿಲ್ವಾರು ವೆಚ್ಚ ಫೀ | 100/– |
| | **ಒಟ್ಟು** | **3,250/–** |

- ಮುಕ್ತ ವಿದ್ಯಾಲಯದಿಂದ ನಿಗಧಿಪಡಿಸಿರುವ ಫೀ ಮೊಬಲಗನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆದು, ಮುಕ್ತ ವಿದ್ಯಾಲಯದ ರಶೀದಿಯಲ್ಲಿ ಫೀ ಮೊಬಲಗಿನ ವಿವರ ದಾಖಲಿಸಿ ವಿದ್ಯಾರ್ಥಿಗಳಿಗೆ ಮೂಲ ಪ್ರತಿ ನೀಡಿ, ಮತ್ತೊಂದು ರಶೀದಿ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ದಾಖಲಾತಿ ಮಾಡಿಕೊಳ್ಳುವುದು
- ಪರೀಕ್ಷಾ ಫೀ ಪಾವತಿ ಬಗ್ಗೆ ಪರೀಕ್ಷಾ ಮಂಡಲಿಯು ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಯಂತೆ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಕ್ರಮವಹಿಸುವುದು

## 5. ಶುಲ್ಕ ಪಾವತಿ ವಿಧಾನ

ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಪಡೆಯುವ ಫೀ ಒಟ್ಟು ಮೊಬಲಗನ್ನು ಈ ಕೆಳಗೆ ನಮೂದಿಸಿರುವ ಕೇಂದ್ರ ಕಛೇರಿ ಬ್ಯಾಂಕ್ ಖಾತೆಗೆ ಆನ್‌ಲೈನ್ ಮೂಲಕ ಕ್ರೆಡಿಟ್ ಕಾರ್ಡ್ / ಡೆಬಿಟ್ ಕಾರ್ಡ್ /RTGS / NEFT ಮೂಲಕ ನಿಗಧಿ ಪಡಿಸಿರುವ ದಿನಾಂಕದೊಳಗೆ ಪಾವತಿಸಿ, ಚಲನ್ ಪ್ರತಿಯನ್ನು ದಾಖಲಾತಿ ನಾಮಿನಲ್ ಪ್ರತಿಯೊಂದಿಗೆ ಲಗತ್ತಿಸಿ, ಕೇಂದ್ರ ಕಛೇರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸುವುದು.

ಫೀ ಮೊಬಲಗನ್ನು ನಿಗಧಿ ಪಡಿಸಿದ ಕೊನೆಯ ದಿನಾಂಕವನ್ನು ಸರ್ಕಾರಿ ರಜಾ ದಿನವೆಂದು ಘೋಷಿಸಿದಲ್ಲಿ ಆ ದಿನದ ಮಾರನೆ ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸುವುದು.

**ಶುಲ್ಕ ಪಾವತಿಸಿದ ನಂತರ ತಕ್ಷಣವೇ ಕರ್ನಾಟಕ ಮುಕ್ತ ವಿದ್ಯಾಲಯ ಕೇಂದ್ರ ಕಛೇರಿಗೆ ದೂರವಾಣಿ / ಇಮೇಲ್ ಮೂಲಕ ಮಾಹಿತಿ ನೀಡುವುದು.**

**ಬ್ಯಾಂಕ್ ಖಾತೆ ವಿವರ**

| | | |
|---|---|---|
| **ಬ್ಯಾಂಕ್ ಹೆಸರು** | – | **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI),** |
| **ಸಂಸ್ಥೆ ಹೆಸರು** | – | **ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ** |
| **ಬ್ರ್ಯಾಂಚ್ ಹೆಸರು** | – | **ಸಿದ್ಧಾರ್ಥನಗರ ಬ್ರ್ಯಾಂಚ್, ಮೈಸೂರು** |
| **ಖಾತೆ ಸಂಖ್ಯೆ** | – | **54007362510** |
| **IFSC code** | – | **SBIN0040273** |

**ಅಥವಾ**

**ಕರ್ನಾಟಕ ಮುಕ್ತ ವಿದ್ಯಾಲಯಕ್ಕೆ ಪಾವತಿಸುವ ಶುಲ್ಕವನ್ನು ಈ ಕೆಳಕಂಡ ಕ್ಯೂಆರ್ (QR)ಕೋಡ್ ಮೂಲಕವೂ ಸಹ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.**

**6. ವೈಯಕ್ತಿಕ ಸಂಪರ್ಕ ತರಗತಿ ಮಾಹಿತಿ**

- ವೈಯಕ್ತಿಕ ಸಂಪರ್ಕ ತರಗತಿಗಳನ್ನು ನಡೆಸಲು ಪ್ರತಿ ವಿಷಯಕ್ಕೆ ಕನಿಷ್ಠ 30 ರಿಂದ ಗರಿಷ್ಠ 40 ಗಂಟೆಗಳ ಅವಧಿಯಂತೆ ವೇಳಾಪಟ್ಟಿಯಲ್ಲಿ ಅಳವಡಿಸಿ ಸಂಪರ್ಕ ತರಗತಿಗಳನ್ನು ಕಡ್ಡಾಯವಾಗಿ ಮೂರು ತಿಂಗಳ ಕಾಲ ನಡೆಸಬೇಕು. ವಿದ್ಯಾರ್ಥಿಗಳ ಹಾಜರಾತಿ, ಬೋಧಿಸಿರುವ ವಿಷಯಗಳ ಶಿಕ್ಷಕರುಗಳ ಮಾಹಿತಿ ಮತ್ತು ಸಂಪರ್ಕ ತರಗತಿಗೆ ಸಂಬಂಧಿಸಿದ ಛಾಯಾ ಚಿತ್ರಗಳೊಂದಿಗೆ ಸಂಪರ್ಕ ತರಗತಿ ಮುಗಿದ ಒಂದು ವಾರದೊಳಗೆ ವರದಿಯನ್ನು ಮುಕ್ತ ವಿದ್ಯಾಲಯ ಕೇಂದ್ರ ಕಛೇರಿಗೆ ತಪ್ಪದೇ ಸಲ್ಲಿಸಬೇಕು

- ಸಂಪರ್ಕ ತರಗತಿಗಳನ್ನು ಶನಿವಾರ, ಭಾನುವಾರ ಮತ್ತು ಸರ್ಕಾರಿ ರಜೆ ದಿನಗಳಂದು ಮೂರು ತಿಂಗಳುಗಳ ಅವಧಿಯಲ್ಲಿ ಕನಿಷ್ಠ 30 ದಿವಸಗಳು ಕಡ್ಡಾಯವಾಗಿ ನಡೆಸಬೇಕು

- ಸಂಪರ್ಕ ತರಗತಿಗಳಲ್ಲಿ ಬೋಧಿಸಲು ಪ್ರೌಢಶಾಲೆ ಶಿಕ್ಷಕರ ನೇಮಕಾತಿಗೆ ಇಲಾಖೆ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅರ್ಹ ಮತ್ತು ಅನುಭವಿ ಶಿಕ್ಷಕರುಗಳನ್ನು ಮಾತ್ರ ನಿಯೋಜಿಸಿಕೊಳ್ಳುವುದು

- ದಾಖಲಾತಿ ಪುಸ್ತಕ, ನಗದು ಪುಸ್ತಕ, ಅರ್ಜಿ ದಾಖಲೆಗಳು, ಸಂಪರ್ಕ ತರಗತಿಗೆ ಸಂಬಂಧಿಸಿದ ಮತ್ತಿತರೆ ದಾಖಲೆಗಳನ್ನು ಕಾಲಕಾಲಕ್ಕೆ ಸಮರ್ಪಕವಾಗಿ ನಿರ್ವಹಿಸಿ ಸುರಕ್ಷಿತವಾಗಿ ಸಂರಕ್ಷಿಸಿಟ್ಟು, ತಪಾಸಣೆ ಅಧಿಕಾರಿಗಳು ಮತ್ತು ಕೇಂದ್ರ ಕಛೇರಿ ಕೇಳುವ ಸಂದರ್ಭದಲ್ಲಿ ಮಾಹಿತಿ ನೀಡುವುದು

- ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸುವ ಮತ್ತು ಫಲಿತಾಂಶ ಸುಧಾರಣೆಗೆ ಅಗತ್ಯ ಪೂರಕ ಕ್ರಿಯಾಯೋಜನೆಯನ್ನು ರೂಪಿಸಿ ಜಾರಿಗೊಳಿಸುವುದು

- **ಮುಕ್ತ ವಿದ್ಯಾಲಯ ಕೇಂದ್ರ ಕಛೇರಿಯಿಂದ ಮಾನ್ಯತೆ ನವೀಕರಣ ಆದೇಶ ಪ್ರತಿ ಪಡೆದುಕೊಂಡ ನಂತರವೇ ಪ್ರಸ್ತುತ ಶೈಕ್ಷಣಿಕ ವರ್ಷದ ದಾಖಲಾತಿ ಪ್ರಕ್ರಿಯೆ ಪ್ರಾರಂಭಿಸಬೇಕು.** ಒಂದು ವೇಳೆ ಕಲಿಕಾ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಿದರೆ, ಸ್ಥಗಿತಗೊಳಿಸಿದ ವರ್ಷದಿಂದ ಮುಂದಿನ ಮೂರು ವರ್ಷಗಳವರೆಗೆ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಾಜರುಪಡಿಸುವ ವ್ಯವಸ್ಥೆ ಮಾಡುವುದು. ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಅವರು ಕೇಳುವ ಶೈಕ್ಷಣಿಕ ಮಾಹಿತಿ ವಿವರಗಳನ್ನು ನೀಡಲು ಕ್ರಮವಹಿಸುವುದು ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳ ಕರ್ತವ್ಯವಾಗಿರುತ್ತದೆ

- ಕರ್ನಾಟಕ ಮುಕ್ತ ವಿದ್ಯಾಲಯ (ಕೆಓಎಸ್) ಕಲಿಕಾ ಕೇಂದ್ರಗಳು ಪ್ರತಿ ವರ್ಷ ನೊಂದಣಿ ನವೀಕರಣಕ್ಕೆ ಪರೀಕ್ಷಾ ಮಂಡಳಿ ಸುತ್ತೋಲೆಯಂತೆ ನಿಗಧಿಪಡಿಸುವ ಶುಲ್ಕ ಪಾವತಿಸಲು ಲಾಗಿನ್‌ನಲ್ಲಿ ಕ್ರಮವಹಿಸಲು ಪರೀಕ್ಷಾ ಮಂಡಳಿಯು ಅವಕಾಶ ಕಲ್ಪಿಸಿದೆ. ನವೀಕರಣ ಶುಲ್ಕವನ್ನು ಆನ್‌ಲೈನ್ ಮೂಲಕ ಕ್ರೆಡಿಟ್‌ಕಾರ್ಡ್ / ಡೆಬಿಟ್ ಕಾರ್ಡ್ / ನೆಫ್ಟ್ ಬ್ಯಾಂಕಿಂಗ್ / RTGS ಮೂಲಕ ಪಾವತಿಸಲು ಅವಕಾಶವಿರುತ್ತದೆ. ಶುಲ್ಕ ಪಾವತಿಸಿದ ಆನ್‌ಲೈನ್ ಚಲನ್ ಪ್ರತಿಯನ್ನು, ಆಯಾ ಕಲಿಕಾ ಕೇಂದ್ರ ವ್ಯಾಪ್ತಿಯಲ್ಲಿರುವ ಡಯಟ್ ಪ್ರಾಂಶುಪಾಲರಿಗೆ ಸಂಬಂಧಿಸಿದ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಸಲ್ಲಿಸಲು ಕ್ರಮವಹಿಸುವುದು. ಡಯಟ್ ಪ್ರಾಂಶುಪಾಲರು ಲಾಗಿನ್ ಮೂಲಕ ದಾಖಲಾತಿಯನ್ನು ಅನುಮೋದಿಸಿದ ನಂತರವಷ್ಟೇ ಅಭ್ಯರ್ಥಿಗಳ ಅರ್ಜಿಯೊಡನೆ ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿ ಸಲ್ಲಿಸಿ ಪರೀಕ್ಷಾ ಮಂಡಳಿ ಕೇಳಿರುವ ಎಲ್ಲಾ ದಾಖಲೆ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು

- ಪರೀಕ್ಷಾ ಮಂಡಳಿ ಹಾಗೂ ಮುಕ್ತ ವಿದ್ಯಾಲಯ ವತಿಯಿಂದ ಏರ್ಪಡಿಸುವ ಸಭೆ ಮತ್ತು ತರಬೇತಿಗೆ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ತಪ್ಪದೇ ಪಾಲ್ಗೊಳ್ಳಬೇಕು
- ಪರೀಕ್ಷೆ ಕಾರ್ಯನಿರ್ವಹಣೆ ಹಾಗೂ ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ (ಟಿ.ಸಿ.) ವಿತರಣೆ ಇತ್ಯಾದಿ ಕಾರ್ಯಗಳನ್ನು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಅವರ ಕೋರಿಕೆಗನುಗುಣವಾಗಿ ನೀಡಲು ಕಲಿಕಾ ಕೇಂದ್ರದಲ್ಲಿ ಸಮಯ ನಿಗಧಿಪಡಿಸಿ ಸಮನ್ವಯಾಧಿಕಾರಿಗಳು ಕ್ರಮವಹಿಸಬೇಕು
- ಅಧಿಸೂಚನೆಯೊಡನೆ ಲಗತ್ತಿಸಿರುವ 2026-27ನೇ ಸಾಲಿನ ದಾಖಲಾತಿ ವೇಳಾಪಟ್ಟಿಯಂತೆ ದಾಖಲಾತಿ ಪ್ರಕ್ರಿಯೆ ಕಾರ್ಯನಿರ್ವಹಿಸುವುದು
- ಅಧಿಸೂಚನೆಯಲ್ಲಿರುವ ಎಲ್ಲಾ ಅಂಶಗಳನ್ನು ಕಲಿಕಾ ಕೇಂದ್ರದವರು ತಪ್ಪದೇ ಪಾಲಿಸಲು ಸೂಚಿಸಿದೆ. ತಪ್ಪಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಆಯಾ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ

## ಕರ್ನಾಟಕ ಮುಕ್ತ ವಿದ್ಯಾಲಯ 10ನೇ ತರಗತಿ ದಾಖಲಾತಿಗೆ ಸಂಬಂಧಿಸಿದಂತೆ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ಸೂಚನೆಗಳು

- ಮಾರ್ಚ್ 01.03.2026ಕ್ಕೆ 15 ವರ್ಷದ ವಯೋಮಿತಿ ಪೂರ್ಣಗೊಳ್ಳುವ ಅಭ್ಯರ್ಥಿಗಳನ್ನು ಮಾತ್ರ ದಾಖಲಾತಿ ಮಾಡಿಕೊಳ್ಳಬೇಕು. 15 ವರ್ಷ ಪೂರ್ಣ ಮಾಡದ ಅಭ್ಯರ್ಥಿಗಳ ಪ್ರವೇಶ ಅರ್ಜಿಯನ್ನು ದಾಖಲಾತಿ ಹಂತದಲ್ಲೇ ತಿರಸ್ಕರಿಸುವುದು
- ಅಭ್ಯರ್ಥಿಯ ದಾಖಲಾತಿಯನ್ನು ಏಳನೇ ತರಗತಿಯ ಮೂಲ ವರ್ಗಾವಣೆ ಪ್ರಮಾಣ ಪತ್ರದಲ್ಲಿರುವಂತೆ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಸ್ಥಳ ಇತ್ಯಾದಿಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ದೃಢೀಕರಿಸಿ ದಾಖಲಾತಿ ಮಾಡಿಕೊಂಡು, ದಾಖಲಾತಿ ಪುಸ್ತಕದಲ್ಲಿ ಎಲ್ಲಾ ವಿವರ ನಮೂದಿಸಿ, ಪ್ರವೇಶ ಅರ್ಜಿ ಮತ್ತು ದಾಖಲಾತಿ ಪುಸ್ತಕ ಹಾಗೂ ಅದಕ್ಕೆ ಸಂಬಂಧಪಟ್ಟ ಇತರೆ ದಾಖಲೆಗಳನ್ನು ಕಲಿಕಾ ಕೇಂದ್ರಗಳಲ್ಲಿ ಸುರಕ್ಷಿತವಾಗಿಡತಕ್ಕದು. ನಾಮಿನಲ್ ರೋಲ್ ಸಿದ್ಧಪಡಿಸಿ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಮೇಲುಸಹಿ ಮಾಡಿ, ಮುಕ್ತ ವಿದ್ಯಾಲಯ ಕೇಂದ್ರ ಕಛೇರಿಗೆ ಪ್ರವೇಶ ಅರ್ಜಿಗಳು ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆ ಮತ್ತು ರಶೀದಿಗಳೊಂದಿಗೆ ಸಲ್ಲಿಸುವುದು
- ಅಭ್ಯರ್ಥಿಗಳ ದಾಖಲಾತಿ ಹಾಗೂ ಕಲಿಕಾ ಕೇಂದ್ರ ನೋಂದಣಿ ಬಗೆಗಿನ ಎಲ್ಲಾ ಮಾಹಿತಿ ವಿವರಗಳನ್ನೊಳಗೊಂಡ ನಾಮಿನಲ್ ರೋಲ್ ಹಾಗೂ ಅಭ್ಯರ್ಥಿಗಳ ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಲಭ್ಯಮಾಡಲಾದ ಆನ್‌ಲೈನ್ ಪೇಮೆಂಟ್ ಮೂಲಕವೇ ಪಾವತಿಸಿ ರಶೀದಿ ಪ್ರತಿಯನ್ನು ಕಲಿಕಾ ಕೇಂದ್ರಗಳು ತಮ್ಮ ವ್ಯಾಪ್ತಿಯಲ್ಲಿರುವ ಡಯಟ್ ಪ್ರಾಂಶುಪಾಲರ ಕಛೇರಿಗೆ ತಲುಪಿಸಿ ಅದರ ಮತ್ತೊಂದು ಪ್ರತಿಯನ್ನು ಕಲಿಕಾ ಕೇಂದ್ರದಲ್ಲಿ ಸಂರಕ್ಷಿಸಿಟ್ಟುಕೊಳ್ಳಬೇಕು
- ಕಲಿಕಾ ಕೇಂದ್ರಗಳ ಮಾನ್ಯತೆ ಅವಧಿ ಮುಗಿದ ತಕ್ಷಣ ನಿಗಧಿತ ಶುಲ್ಕವನ್ನು ಮುಕ್ತ ವಿದ್ಯಾಲಯ ಕೇಂದ್ರ ಕಛೇರಿಗೆ ಪಾವತಿಸಿ ಮಾನ್ಯತೆ ನವೀಕರಣ ಮಾಡಿಕೊಂಡ ನಂತರವೇ ಪ್ರಸ್ತುತ ಸಾಲಿನ ಪ್ರವೇಶ ದಾಖಲಾತಿ ಪ್ರಕ್ರಿಯೆ ಆರಂಭಿಸಬೇಕು.
- ಹೊಸದಾಗಿ ಪ್ರಾರಂಭವಾದ ಕಲಿಕಾ ಕೇಂದ್ರಗಳು ಶಾಲಾ ಸಂಕೇತವನ್ನು ಪರೀಕ್ಷಾ ಮಂಡಳಿಯಿಂದ ಪಡೆದುಕೊಳ್ಳಲು ನಿಗಧಿತ ನೋಂದಣಿ ಶುಲ್ಕವನ್ನು ಮತ್ತು ಇತರ ಕಲಿಕಾ ಕೇಂದ್ರಗಳು ವಾರ್ಷಿಕ ನವೀಕರಣ ಶುಲ್ಕವನ್ನು ಸಕಾಲಕ್ಕೆ ಕಡ್ಡಾಯವಾಗಿ ಪಾವತಿಸಿದರೆ ಮಾತ್ರ ಪರೀಕ್ಷಾ ಮಂಡಳಿಯು ಕಲಿಕಾ ಕೇಂದ್ರದ ಪರೀಕ್ಷಾ ಅರ್ಜಿ ಮತ್ತು ನಾಮಿನಲ್ ರೋಲ್ ಸ್ವೀಕರಿಸಲಾಗುತ್ತದೆ.
- ನಾಮಿನಲ್ ರೋಲ್ ಅನ್ನು ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಕಡ್ಡಾಯವಾಗಿ ದೃಢೀಕರಿಸುವುದು

- 2027ರ ಕೆಓಎಸ್ ಮುಖ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಪರೀಕ್ಷಾ ನೋಂದಣಿ ಮಾಹಿತಿಯನ್ನು ಮಂಡಳಿಯ ಜಾಲತಾಣ www.kseab.karnataka.gov.in ಇಲ್ಲಿ login / other exam portal / KOS examination login ಮೂಲಕ ಸಂಸ್ಥೆಯ ಲಾಗಿನ್‌ನಲ್ಲಿ ಪರೀಕ್ಷಾರ್ಥಿಗಳ ಮಾಹಿತಿಗಳನ್ನು upload ಮಾಡಲು ಸೂಚಿಸಿದೆ.

- ಕಲಿಕಾ ಕೇಂದ್ರ ಮಾನ್ಯತೆ ನವೀಕರಣ ಪ್ರತಿ ಮತ್ತು ಫೀ ಸಂದಾಯ ರಶೀದಿಯ ಪ್ರತಿಯನ್ನು Board login ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.

- ಪರೀಕ್ಷಾ ಮಂಡಳಿ ಕಾಲಕಾಲಕ್ಕೆ ಪರೀಕ್ಷೆಗೆ ಸಂಬಂಧಿಸಿದಂತೆ ಹೊರಡಿಸಿರುವ ಸುತ್ತೋಲೆ/ ಅಧಿಸೂಚನೆಯಂತೆ ಕ್ರಮವಹಿಸುವುದು.

- ಪ್ರತಿ ಕಲಿಕಾ ಕೇಂದ್ರದಿಂದ ಕನಿಷ್ಠ 50 ವಿದ್ಯಾರ್ಥಿಗಳನ್ನು ಧಾಖಲಾತಿ ಮಾಡಲು ತಿಳಿಸಿದೆ. ಕಡಿಮೆ ದಾಖಲಾತಿ ಮಾಡಿದ ಕಲಿಕಾ ಕೇಂದ್ರದವರು ವಿದ್ಯಾರ್ಥಿಗಳನ್ನು ಹತ್ತಿರದ ಕಲಿಕಾ ಕೇಂದ್ರದಿಂದ ಪರೀಕ್ಷಾ ಮಂಡಳಿಗೆ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಬೇಕಾಗಿರುತ್ತದೆ.

ಸದರಿ ಶೈಕ್ಷಣಿಕ ವರ್ಷದ ದಾಖಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಕೇಂದ್ರ ಕಛೇರಿಯ ಈ ಕೆಳಕಂಡ ದೂರವಾಣಿ ಮತ್ತು ಮೊಬೈಲ್ ಸಂಖ್ಯೆ ಮೂಲಕ ಸಂಪರ್ಕಿಸುವುದು.

**ದೂರವಾಣಿ ಸಂಖ್ಯೆ : 0821 – 2548269, ಮೊಬೈಲ್ ಸಂಖ್ಯೆ : 9590191113.**
**ವೆಬ್‌ಸೈಟ್ : www.jsskos.com**

ಹಾಲೆ 10/6
ಮುಖ್ಯ ಸಮನ್ವಯಾಧಿಕಾರಿ
ಮುಖ್ಯ ಸಮನ್ವಯಾಧಿಕಾರಿಗಳು
ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ
ಮೈಸೂರು-570029

ಪ್ರತಿಯನ್ನು :-

1. ಕರ್ನಾಟಕ ಮುಕ್ತ ವಿದ್ಯಾಲಯದಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ಮುಕ್ತ ವಿದ್ಯಾಲಯದ ಎಲ್ಲಾ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳಿಗೆ ಕ್ರಮಕ್ಕಾಗಿ.
2. ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು – ಇವರಿಗೆ ಮಾಹಿತಿಗಾಗಿ.
3. ಆಡಳಿತ ಮಂಡಳಿ ಪ್ರತಿ – ಇವರಿಗೆ ಮಾಹಿತಿಗಾಗಿ.
4. ಕಛೇರಿ ಪ್ರತಿ.

## 2026–27ನೇ ಸಾಲಿನ ದಾಖಲಾತಿಗೆ ಸಂಬಂಧಿಸಿದ
## ಕಾರ್ಯಚಟುವಟಿಕೆ ನಿಗಧಿಪಡಿಸಿರುವ ದಿನಾಂಕಗಳ ವಿವರ

| ಕ್ರ. ಸಂ | ವಿವರ | ದಿನಾಂಕ |
|---|---|---|
| 1. | ಅಧಿಸೂಚನೆ ಪ್ರಕಟಣೆ | 10.06.2026 |
| 2. | ಕೇಂದ್ರ ಕಛೇರಿಯಿಂದ ದಾಖಲಾತಿ ಅರ್ಜಿ ರಶೀತಿ ಮತ್ತು ದಾಖಲಾತಿ ರಿಜಿಸ್ಟರ್ ವಿತರಣೆ ಪ್ರಾರಂಭ | 13.06.2026 |
| 3. | ಎ) ದಾಖಲಾತಿಗೆ ಕೊನೆಯ ದಿನಾಂಕ | 30.11.2026 |
| | ಬಿ) ಕರ್ನಾಟಕ ಮುಕ್ತ ವಿದ್ಯಾಲಯಕ್ಕೆ ದಾಖಲಾತಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 04.12.2026 |
| | ಸಿ) ರೂ.100/– ದಂಡ ಶುಲ್ಕ ಸಹಿತ ಕೊನೆಯ ದಿನಾಂಕ | 31.12.2026 |
| | ಡಿ) ಕರ್ನಾಟಕ ಮುಕ್ತ ವಿದ್ಯಾಲಯಕ್ಕೆ ದಂಡ ಹಾಗೂ ದಾಖಲಾತಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 04.01.2027 |
| 4. | ನಾಮಾಂಕಿತ ಪಟ್ಟಿಯೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ | 20.01.2027 |
| 5. | ವೈಯಕ್ತಿಕ ಸಂಪರ್ಕ ತರಗತಿ ವೇಳಾಪಟ್ಟಿಗೆ ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆದುಕೊಳ್ಳುವ ದಿನಾಂಕ | 14.10.2026 ರಿಂದ 02.11.2026 ರವರೆಗೆ |
| 6. | ವೈಯಕ್ತಿಕ ಸಂಪರ್ಕ ತರಗತಿ ಪ್ರಾರಂಭ ಮುಕ್ತಾಯ | 08.11.2026 ರಿಂದ 28.03.2027 ರವರೆಗೆ |
| 7. | ಸಂಪರ್ಕ ತರಗತಿ ಪೂರ್ಣ ವರದಿ ಸಲ್ಲಿಸಲು ಕೊನೆಯ ದಿನಾಂಕ | ತರಗತಿ ಮುಗಿದ ಒಂದು ವಾರದೊಳಗೆ ಅಥವಾ 06.04.2027ರ ಮುಂಚೆ |
| 8. | ವಾರ್ಷಿಕ ಮುಖ್ಯ ಪರೀಕ್ಷೆ ನಡೆಯುವ ತಿಂಗಳು | ಏಪ್ರಿಲ್ / ಮೇ ಮಾಹೆ |

10/6

ಮುಖ್ಯ ಸಮನ್ವಯಾಧಿಕಾರಿ
ಮುಖ್ಯ ಸಮನ್ವಯಾಧಿಕಾರಿಗಳು
ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ
ಮೈಸೂರು-570029